# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.569/2024

| | | |
|---|---|---|
| ಸಾಕ್ಷಿದಾರರ ಹೆಸರು | : ಚೇತನ್ ಕೆ. | ಫ್ರಾಸಾ-1 |
| ತಂದೆಯ ಹೆಸರು | : ಕುಬೇಂದ್ರಪ್ಪ | ಚಾಸಾ-1 |
| ವಯಸ್ಸು | : 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : DRFO | ದಿನಾಂಕಃ29.12.2025 |
| ವಾಸಸ್ಥಳ | : ಆವತಿ, ಮಲ್ಲಂದೂರು. | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ದಿ.03.06.2019 ರಿಂದ ದಿ.15.05.2025 ರವರೆಗೂ ಮೂಾಡಿಗೆರೆ ತಾಲ್ಲೂಕಿನ ಕುಂದೂರು ಅರಣ್ಯ ಶಾಖೆಯಲ್ಲಿ DRFO ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.20.11.2022 ಬೆ.7.45 ಕ್ಕೆ ಚಾಸಾ-10 ರವರು ದೂರವಾಣಿ ಮೂಲಕ ನನಗೆ ಕರೆ ಮಾಡಿ ಎಸ್ಟೇಟ್ ಕುಂದೂರಿನ ರಘುಗೌಡರವರ ಕಾಫೀ ತೋಟದಲ್ಲಿ ಶೋಭ ಎನ್ನುವವರನ್ನು ಆನೆ ತುಳಿದು ಸಾಯಿಸಿದೆ ಎಂದು ತಿಳಿಸಿದರು. ಬೆ.8.15 ರ ಸಮಯಕ್ಕೆ ನಾನು ಚಾಸಾ-4 ಮತ್ತು 11 ರವರನ್ನು ಕರೆದುಕೊಂಡು ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಸುಮಾರು 80-100 ಜನರು ಸೇರಿದ್ದರು. ಅದರಲ್ಲಿ ಕೆಲವರು ನಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ನಮ್ಮ ಮೇಲೆ ದಾಳಿ ಮಾಡಲು ಪ್ರಯತ್ನಿಸಿದರು. ಆ ಸಮಯಕ್ಕೆ ಮೂಡಿಗೆರೆ ಪೋಲಿಸರು ನಮಗೆ ತಪ್ಪಿಸಿಕೊಳ್ಳಿ ಎಂದು ಹೇಳಿದಾಗ ನಾನು ಮತ್ತು ಚಾಸಾ-4 ರವರು ಓಡಿಹೋಗುವಾಗ ಸದರಿ ವ್ಯಕ್ತಿಗಳು ನಮ್ಮ ಮೇಲೆ ಕಲ್ಲು ಮತ್ತು ಚಪ್ಪದಲಿಯನ್ನು ತೂರಿದರು. ಈ ಕಾರಣ ನನ್ನ ಬಲಭುಜಕ್ಕೆ ಒಂದು ಕಲ್ಲು ತಾಗಿ ಪೆಟ್ಟಾಯಿತು. ನಾವು 100 ಮೀಟರ್ ಗಳಷ್ಟು ಓಡಿ ರವಿಗೌಡ ರವರ ತೋಟದ ಬೇಲಿ ದಾಟಿ ಕಾಫೀ ತೋಟದಲ್ಲಿ ಮರೆಮಾಚಿ ಕೂತೆವು. ನಂತರ ಸದರಿ ವ್ಯಕ್ತಿಗಳ ಪೈಕಿ ಕೆಲವರು ಸದರಿ ಸ್ಥಳದಿಂದ 200 ಮೀಟರ್ ದಲ್ಲಿ ಇದ್ದ ಕಳ್ಳಬೇಟೆ ನಿಗ್ರಹ ಶಿಭಿರದ ಹತ್ತಿರ ಹೋಗಿ ಮೊದಲನೇ ಮಹಡಿಯ ಬಾಗಿಲು ಮುರಿದು ಒಳಗೆ ಇದ್ದ ಮಂಚ, ಪ್ಲಾಸ್ಟಿಕ್ ಚೇರ್, ಕಿಟಕಿ ಗಾಜುಗಳನ್ನು ಹೊಡೆದುಹಾಕಿ ಅವುಗಳನ್ನು ಮತ್ತು ಇತರೆ ವಸ್ತುಗಳನ್ನು ಕೆಳಗೆ ಬಿಸಾಡಿದರು. ಸದರಿ ವಸ್ತುಗಳು ಜಖಂಗೊಂಡಿರುತ್ತವೆ.

ಈ ಘಟನೆಯನ್ನು ನಾನು ಮತ್ತು ಚಾಸಾ-4 ರವರು ಕಾಫೀ ತೋಟದಿಂದ ನೋಡಿರುತ್ತೇವೆ. ಮೂಡಿಗೆರೆ ಪೋಲಿಸ್ ಠಾಣೆಯ ಇಬ್ಬರು ಸಿಬ್ಬಂದಿಗಳು ಸದರಿ ವ್ಯಕ್ತಿಗಳನ್ನು ತಡೆಯಲು ಪ್ರಯತ್ನಿಸಿದರು ಸಹಾ ಅವರ ಮಾತನ್ನು ಕೇಳಿಲ್ಲ. ಈ ಕಾರಣ ಪೋಲಿಸರೇ ಘಟನೆಯ ವೀಡಿಯೋ ಮಾಡಿದ್ದಾರೆ. ನಂತರ ನಾನು ಸದರಿ ಸ್ಥಳದಿಂದ ಕಾಲ್ನಡಿಗೆಯಲ್ಲಿ ಗುಲ್ಲನ್ ಪೇಟೆಗೆ ಬಂದು ಆಲ್ದೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿ ಚಿಕಿತ್ಸೆ ಪಡೆದು ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆದಿರುತ್ತೇವೆ. ಇಲಾಖಾ ಮೇಲಾಧಿಕಾರಿಗಳು ಶೋಭ ಮೃತ ದೇಹವಿದ್ದ ಸ್ಥಳದಲ್ಲಿ ಇದ್ದ ಕಾರಣ ಅವರನ್ನು ರಾತ್ರಿ ಸಮಯಕ್ಕೆ ಸಂಪರ್ಕಿಸಲು ಆಗಲಿಲ್ಲ. ಈ ಕಾರಣ ಮರುದಿನ ಬೆಳಗ್ಗೆ DCF ರವರ ಅನುಮತಿ ಪಡೆದು ದಿ.21.11.2022 ರಂದು ಬೆ.10.30 ರ ಸಮಯಕ್ಕೆ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ

ದೂರು ದಾಖಲಿಸಿರುತ್ತೇನೆ. ದಿ.22.11.2022 ರಂದು ಪುನಃ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ಅಲ್ಲಿ ವೀಡಿಯೋ ದೃಶ್ಯಾವಳಿಯಲ್ಲಿ ಸಿಬ್ಬಂದಿಗಳ ಸಹಾಯದಿಂದ ಆರೋಪಿತರನ್ನು ಗುರುತಿಸಿ ಹೆಚ್ಚುವರಿ ಹೇಳಿಕೆ ನೀಡಿರುತ್ತೇನೆ. ಆ ದಿನ ಸ.4.35 ಕ್ಕೆ ಪೋಲಿಸರು ಮಹಜರ್ ಬರೆಯಲು ಘಟನಾ ಸ್ಥಳಕ್ಕೆ ಬಂದಿದ್ದು ಸ.4.35 ರಿಂದ 6.05 ರ ಸಮಯದವರೆಗೂ ಕಳ್ಳಬೇಟೆ ಶಿಭಿರದ ಬಳಿ ಮಹಜರ್ ಬರೆದು ಜಖಂಗೊಂಡಿದ್ದ ಫೈಬರ್ ಡೋರ್, ಮರದ ಬಾಗಿಲು, ಕಿಟಕಿ ಗಾಜು ಮತ್ತು ಫ್ರೇಮ್, ಸೋಲಾರ್ ಲ್ಯಾಂಪ್ ಮತ್ತು ಬ್ಯಾಟರಿ, ಒಂದು ಟೇಬಲ್ ಮತ್ತು ಮೂರು ಪ್ಲಾಸ್ಟಿಕ್ ಚೇರ್ ಗಳನ್ನು ವಶಕ್ಕೆ ಪಡೆದರು. ನಂತರ ಸ.6.20 ರ ಸಮಯಕ್ಕೆ ಶೋಭ ರವರ ಮೃತ ದೇಹವಿದ್ದ ಸ್ಥಳದ ಬಳಿ ಹೋಗಿ ಅಲ್ಲಿ ಸಿಕ್ಕ ಒಂದು ಕಲ್ಲು, ಎರಡು ಎಡಗಾಲಿನ ಸ್ಲಿಪ್ಪರ್ ಗಳನ್ನು ವಶಕ್ಕೆ ಪಡೆದು ಸ.7.20 ರವರೆಗೂ ಮಹಜರ್ ಬರೆದರು. ಮಹಜರ್ ಕಾಲಕ್ಕೆ ನಾನೇ ಸ್ಥಳವನ್ನು ತೋರಿಸಿದ್ದು ಆ ಸಮಯಕ್ಕೆ ಚಾಸಾ-2 ಮತ್ತು 3 ರವರು ಪಂಚರಾಗಿ ಹಾಜರಿದ್ದರು.

ಸಾಕ್ಷಿಯು ದಿ.21.11.2022 ರ ದೂರು, ಪ್ರ.ವ.ವರದಿ, ದಿ.22.11.2022 ರ ಎರಡು ಮಹಜರ್ ಗಳು ಮತ್ತು 7 ಪೋಟೋಗಳನ್ನು ಮಹಜರ್ ಕಾಲಕ್ಕೆ ತೆಗೆದಿರುವ ಬಗ್ಗೆ ಗುರುತಿಸುತ್ತಾರೆ. ಸದರಿ ದಾಖಲೆಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ಕ್ರಮವಾಗಿ ನಿಪಿ-1 ರಿಂದ 13, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮೂರು ಪ್ಲಾಸ್ಟಿಕ್ ಚೇರ್ ಗಳು, ಒಂದು ಪ್ಲಾಸ್ಟಿಕ್ ಟೇಬಲ್, ತುಂಡಾಗಿರುವ ಫೈಬರ್ ಡೋರ್, ಮರದ ಡೋರ್, ಸೋಲಾರ್ ಬ್ಯಾಟರಿ, ಸೋಲಾರ್ ಲ್ಯಾಂಪ್, ಗಾಜಿನ ಚೂರು, ಕಲ್ಲು ಮತ್ತು ಎರಡು ಸ್ಲಿಪ್ಪರ್ ಗಳನ್ನು ನೋಡಿ ಗುರುತಿಸಿದ್ದು, ಮೂರು ಪ್ಲಾಸ್ಟಿಕ್ ಚೇರ್ ಗಳನ್ನು ಒಟ್ಟಾಗಿ ಎಂ.ಒ.1, ಪ್ಲಾಸ್ಟಿಕ್ ಟೇಬಲ್ ನ್ನು ಎಂ.ಒ.2, ಫೈಬರ್ ಡೋರ್ ಪೀಸ್ ಗಳನ್ನು ಒಟ್ಟಾಗಿ ಎಂ.ಒ.3, ಮರದ ಡೋರ್ ನ್ನು ಎಂ.ಒ.4, ಸೋಲಾರ್ ಬ್ಯಾಟರಿಯನ್ನು ಎಂ.ಒ.5, ಸೋಲಾರ್ ಲ್ಯಾಂಪ್ ನ್ನು ಎಂ.ಒ.6, ಗಾಜಿನ ಚೂರುಗಳನ್ನು ಎಂ.ಒ.7, ಕಲ್ಲನ್ನು ಎಂ.ಒ.8, ಎರಡು ಸ್ಲಿಪ್ಪರ್ ಗಳನ್ನು ಎಂ.ಒ.9 ಮತ್ತು 10, ಸಾಕ್ಷಿಯ ಸಹಿಗಳನ್ನು ಎಂ.ಒ.1(ಎ) ರಿಂದ 10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2, 3, 5 ರಿಂದ 18, 20 ಮತ್ತು 21 ನೇ ಆರೋಪಿತರನ್ನು ನೋಡಿ ಮೇಲೆ ಹೇಳಿದಂತೆ ತಮಗೆ ಹಲ್ಲೆ ಮಾಡಿ ಅರಣ್ಯ ಕಚೇರಿಯ ವಸ್ತುಗಳನ್ನು ನಾಶಪಡಿಸಿದ ವ್ಯಕ್ತಿಗಳು ಇವರೇ ಎಂದು ಗುರುತಿಸುತ್ತಾರೆ. 1, 4 ಮತ್ತು 19 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸುತ್ತಾರೆ.

**ಪಾಟೀ ಸವಾಲು: 1, 2, 4 ರಿಂದ 6, 8, 13, 14, 16, 17, 20 ಮತ್ತು 21 ನೇ ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:**

ದಿ.20.11.2022 ರಂದು ನಾನು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ದೂರಿನೊಂದಿಗೆ ದಾಖಲೆಯನ್ನು ಕೊಟ್ಟಿರಲಿಲ್ಲ. ಯಾವ ಮೊಬೈಲ್ ಸಂಖ್ಯೆಯಿಂದ ನನಗೆ ಕರೆ ಬಂದಿತ್ತು ಎಂದು ಸದರಿ ಮೊಬೈಲ್ ಸಂಖ್ಯೆ ಈಗ ನನಗೆ ನೆನಪಿಲ್ಲ. ನನ್ನ ಮೊಬೈಲ್ ನಲ್ಲಿ ಚಾಸಾ-10 ರವರ ಮೊಬೈಲ್ ಸಂಖ್ಯೆ

ಸೇವ್ ಆಗಿದೆ. ಚಾಸಾ-10 ರವರ ಮೊಬೈಲ್ ಸಂಖ್ಯೆಯನ್ನು ದೂರಿನಲ್ಲಿ ಬರೆದಿಲ್ಲ, ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ಇಲ್ಲ ಎಂದು ತಿಳಿದುಕೊಂಡಿದ್ದೆ ಎಂದು ನುಡಿಯುತ್ತಾರೆ. ದೂರನ್ನು ಪೋಲೀಸ್ ಠಾಣೆಯಲ್ಲೇ ಟೈಪ್ ಮಾಡಿಸಿದ್ದೆ. ದೂರನ್ನು ಚಾಸಾ-31 ರವರು ಟೈಪ್ ಮಾಡಿದ್ದಾರೆ. ಶೋಭ ಎನ್ನುವವರು ರಘುಗೌಡ ಎನ್ನುವವರ ತೋಟದಲ್ಲಿ ಮೃತಪಟ್ಟಿದ್ದರು. ಈ ವಿಚಾರ ನಾನು ದೂರು ಕೊಡುವ ಕಾಲಕ್ಕೆ ನನಗೆ ತಿಳಿದಿತ್ತು. ದೂರನ್ನು ನಾನು ಓದಿ ನೋಡಿದ್ದೆ. ನಾನು ಹೇಳಿದ ವಿಚಾರವನ್ನು ಹೊರತುಪಡಿಸಿ ಬೇರೆ ಏನನ್ನು ದೂರಿನಲ್ಲಿ ಬರೆದಿದ್ದರೆ ಅದಕ್ಕೆ ನನ್ನ ಸಣ್ಣ ಸಹಿ ಮಾಡುತ್ತಿದ್ದೆ ಎಂದರೆ ಸರಿ. ನಿಪಿ-1 ರಲ್ಲಿ ಶೋಭ ರವರು ರವಿಗೌಡರವರ ಕಾಫೀ ತೋಟದಲ್ಲಿ ಮೃತರಾಗಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಆ ವಿಚಾರ ಸರಿಯಲ್ಲ ಎಂದರೆ ಸರಿ. ದೂರಿನ ಪ್ರತೀಪುಟಕ್ಕೂ ನಾನು ಸಹಿ ಮಾಡಿಲ್ಲ.

ನನಗೆ ಕಲ್ಲು ಬೀಸಿದವರು ಯಾರು ಎಂದು ನಾನು ನೋಡಿದ್ದೆ. ನಾವು ಓಡುವಾಗ ಹಿಂದಿನಿಂದ ಕಲ್ಲು ಮತ್ತು ಚಪ್ಪಲಿ ಎಸೆಲಾಯಿತು ಎಂದು ದೂರಿನಲ್ಲಿ ನಮೂದಾಗಿದೆ ಎಂದರೆ ಸರಿ. ನಾನು ಹಿಂದೆ ತಿರುಗಿ ನೋಡಿದ್ದೆ ಎಂದು ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಓಡಿಹೋಗಿ ಎಂದು ಹೇಳಿದ ಪೋಲೀಸರ ಹೆಸರು ನನಗೆ ಗೊತ್ತಿಲ್ಲ. ಪೋಲೀಸರು ನಮಗೆ ಓಡಿಹೋಗಿ ಎಂದು ಹೇಳಿದ್ದರು ಎನ್ನುವ ವಿಚಾರವನ್ನು ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾವು ಸ್ಥಳಕ್ಕೆ ಹೋಗಿದ್ದಾಗ ಆರೋಪಿತರು ಉದ್ರೇಖಿತರಾಗಿ ನಮಗೆ ಬೈದು ಹಲ್ಲೆ ಮಾಡಿದ್ದಾರೆ ಎನ್ನುವ ವಿಚಾರ ಸುಳ್ಳಾಗಿದ್ದು ಈ ವಿಚಾರವನ್ನು ಪ್ರಕಣಕ್ಕೋಸ್ಕರ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರವಿಗೌಡ ರವರ ತೋಟದಲ್ಲಿ ಮರೆಯಾಗಿ ಕುಳಿತಿದ್ದೆ ಎಂದು ಹೇಳಿರುವ ವಿಚಾರ ನಿಪಿ-1 ರಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ಕಾಲ್ನಡಿಗೆಯಲ್ಲಿ ಗುಲ್ಲನ್ ಪೇಟೆಗೆ ಹೋದೆ ಎನ್ನುವ ವಿಚಾರವನ್ನು ದೂರಿನಲ್ಲಿ ನಮೂದಿಸಿಲ್ಲ. ದಿ.20.11.2022 ರಂದು ನಾನು ಧರಿಸಿದ್ದ ಸಮವಸ್ತ್ರ ಮಣ್ಣಾಗಿತ್ತು, ಆದರೆ ಡ್ಯಾಮೇಜ್ ಆಗಿರಲಿಲ್ಲ. ಕಲ್ಲು ತಾಗಿದ್ದರಿಂದ ನನ್ನ ಸಮವಸ್ತ್ರ ದೂಳಾಗಿತ್ತು. ಈ ವಿಚಾರವನ್ನು ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆ ದಿನ ನಾನು ಧರಿಸಿದ್ದ ಸಮವಸ್ತ್ರವನ್ನು ಪೋಲೀಸರಿಗೆ ಕೊಟ್ಟಿಲ್ಲ.

ನಾನು ಇಲಾಖಾ ಸಮವಸ್ತ್ರ ಧರಿಸಿ ಸ್ಥಳಕ್ಕೆ ಹೋಗಿದ್ದೆ ಎಂದು ನಿಪಿ-1 ರಲ್ಲಿ ನಮೂದಾಗಿಲ್ಲ ಎಂದರೆ ಸರಿ. ನನಗೆ ತಾಗಿದ ಕಲ್ಲನ್ನು 7-8 ಅಡಿ ದೂರದಿಂದ ಬೀಸಿ ಹೊಡೆದಿದ್ದರು ಹಾಗೂ ಅದು ಹಿಡಿ ಗಾತ್ರದ ಕಲ್ಲಾಗಿತ್ತು. ಹಿಡಿ ಗಾತ್ರದ ಕಲ್ಲನ್ನು 7-8 ಅಡಿ ದೂರದಿಂದ ಬೀಸಿ ಹೊಡೆದರೆ ತೀವ್ರ ಸ್ವರೂಪದ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ನನಗೆ ಕಲ್ಲು ತಾಗಿದ್ದರಿಂದ ನನಗೆ ಗಾಯ ಆಗಿರಲಿಲ್ಲ, ಆದರೆ ತೀವ್ರವಾಗಿ ನೋವಾಗಿತ್ತು ಮತ್ತು ಇಂದಿಗೂ ಸಹಾ ನೋವಿದೆ. ನಮ್ಮ ಮೇಲೆ ಯಾರು ಚಪ್ಪಲಿ ಎಸೆದಿದ್ದಾರೆ ಎಂದು ನಾನು ಕಣ್ಣಾರೆ ನೋಡಿದ್ದೆ. ಆ ವ್ಯಕ್ತಿಯ ಹೆಸರನ್ನು ದೂರಿನಲ್ಲಿ ಬರೆಸಿಲ್ಲ. ಚಪ್ಪಲಿಯ ಬಣ್ಣ ಮತ್ತು ಮಾದರಿಯನ್ನು ಸಹಾ ದೂರಿನಲ್ಲಿ ಬರೆಸಿಲ್ಲ. ಒಂದು ಗ್ರೇ ಬಣ್ಣದ ಚಪ್ಪಲಿ ಮತ್ತು ಒಂದು ಆರೆಂಜ್ ಮತ್ತು ಬ್ಲ್ಯೂ ಮಿಕ್ಸಡ್ ಬಣ್ಣದ ಚಪ್ಪಲಿಯನ್ನು ಪೋಲೀಸರು ವಶಕ್ಕೆ ಪಡೆದಿದ್ದಾರೆ. ಆ ರೀತಿ ವಶಕ್ಕೆ ಪಡೆದ ಚಪ್ಪಲಿಗಳ ಮೇಲೆ ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಗಿತ್ತ ಎಂದು ನನಗೆ ನೆನಪಿಲ್ಲ. ಕಲ್ಲು ಮತ್ತು ಚಪ್ಪಲಿಯೊಂದಿಗೆ ನನ್ನನ್ನು ನಿಲ್ಲಿಸಿ ಪೋಲೀಸರು ಫೋಟೋ ತೆಗೆದಿದ್ದಾರೆ. ಎಂ.ಒ.10

ಆರೆಂಜ್ ಬಣ್ಣದಲ್ಲ ಎಂದರೆ ಸರಿಯಲ್ಲ. ಎಂ.ಒ.9 ರಂತೆ ಗುರುತಾಗಿರುವ ಚಪ್ಪಲಿ ಖಾಕಿ ಬಣ್ಣದ್ದು ಎಂದರೆ ಸಾಕ್ಷಿಯು ಅದು ಗ್ರೇ ಎಂದು ನುಡಿಯುತ್ತಾರೆ.

ನಾನು ಗುರುತಿಸಿರುವ ಎರಡು ಮಹಜರ್ ಗಳನ್ನು ಪೋಲಿಸರು ಬರೆದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಮಹಜರ್ ಕಾಲಕ್ಕೆ 4 ಜನ ಪೋಲಿಸರು ಇದ್ದರು. ಸದರಿ 4 ಜನ ಪೋಲಿಸರು ಫೋಟೋಗೆ ನಿಂತಿಲ್ಲ, ಆದರೆ PSI ರವರು ಮಾತ್ರ ನಿಂತಿದ್ದಾರೆ. ನಾವು ದಿನದ 24 ಗಂಟೆಯೂ ಸಹಾ ಕರ್ತವ್ಯದಲ್ಲಿ ಇರುತ್ತೇವೆ ಎಂದರೆ ಸರಿ. ಕರ್ತವ್ಯದಲ್ಲಿ ಎಲ್ಲಾದರು ಹೋಗಬೇಕಾದರೆ ಸಮವಸ್ತ್ರದಲ್ಲಿ ಹೋಗುತ್ತೇವೆ ಎಂದರೆ ಸರಿ. ಮಹಜರ್ ಕಾಲಕ್ಕೆ ನಾನು ಕರ್ತವ್ಯದಲ್ಲಿಯೇ ಇದ್ದೆ. ನಿಪಿ-5 ರಿಂದ 9 ಮತ್ತು ನಿಪಿ-10 ಹಾಗೂ 11 ರ ಫೋಟೋಗಳಲ್ಲಿ ನಾನು ಇಲಾಖಾ ಸಮವಸ್ತ್ರದಲ್ಲಿ ಇಲ್ಲ ಎಂದರೆ ಸರಿ. ಸ್ಟವ್ ಮತ್ತು ಸಿಲೆಂಡರ್ ನ್ನು ಪೋಲಿಸರು ವಶಕ್ಕೆ ಪಡೆದಿಲ್ಲ. ಚೇರ್ ಗಳನ್ನು ವಶಕ್ಕೆ ಪಡೆಯುವಾಗ ಫೋಟೋ ತೆಗೆಯಲಾಗಿದೆ. ನಿಪಿ-5 ರಲ್ಲಿ ಕೇವಲ ಎರಡು ಚೇರ್ ಗಳು ಕಾಣುತ್ತಿವೆ ಎಂದರೆ ಸರಿ. ಇಲಾಖಾ ಕಚೇರಿಯಲ್ಲಿ ಇರುವ ವಸ್ತುಗಳ ಸಂಬಂಧ ದಾಖಲೆಗಳು ಇರುತ್ತವೆ ಎಂದರೆ ಸರಿ. ಅಂತಹ ದಾಖಲೆಗಳನ್ನು ಪೋಲಿಸರು ನನ್ನ ಸಮಕ್ಷಮ ವಶಕ್ಕೆ ಪಡೆದಿಲ್ಲ. ಬಾಗಿಲುಗಳನ್ನು ಅಳತೆ ಮಾಡಿ ಮಹಜರ್ ನಲ್ಲಿ ಬರೆಯಲಾಗಿದೆ. ಬಾಗಿಲುಗಳಿಗೆ ಅಳವಡಿಸಿದ ಬೋಲ್ಟ್ ಮತ್ತು ಚಿಲಕದ ಮಾದರಿಗಳನ್ನು ಮಹಜರ್ ನಲ್ಲಿ ಬರೆದಿಲ್ಲ.

ಶಿಬಿರ ಕಟ್ಟಡಕ್ಕೆ ಅಳವಡಿಸಿದ್ದ ಬಾಗಿಲುಗಳನ್ನು ಲಾಕ್ ಮಾಡಲಾಗಿತ್ತು. ಅವುಗಳ ಬೀಗ ನಮ್ಮ ಬಳಿಯೇ ಇತ್ತು. ಕೀ ಗಳನ್ನು ಪೋಲಿಸರು ವಶಕ್ಕೆ ಪಡೆದಿಲ್ಲ. ಎಂ.ಒ.1 ರಿಂದ 10 ರ ವಸ್ತುಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ನಮ್ಮ ಇಲಾಖೆಯವರು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ವಸ್ತುಗಳಿಗೂ ಆರೋಪಿತರಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಳ್ಳಬೇಟೆ ಶಿಬಿರದ ಕಟ್ಟಡದ ಮುಂದೆ ಒಂದು ರಸ್ತೆ ಇದ್ದು ಆ ರಸ್ತೆಯ ನಂತರ ರವಿಗೌಡರವರ ಕಾಫೀ ತೋಟ ಇದೆ. ಸದರಿ ರಸ್ತೆ ಸುಮಾರು 12 ಅಡಿ ಅಗಲ ಇದೆ. ನಾವು ಮರೆಯಾಗಿ ಕೂತಿದ್ದ ಸ್ಥಳದಿಂದ ಸದರಿ ರಸ್ತೆಗೆ ಸುಮಾರು 10 ಅಡಿ ದೂರ ಇತ್ತು. ನಾವು ಕೂತಿದ್ದ ತೋಟ ಚಂದ್ರೇಗೌಡ ರವರ ಮಗ ರವಿಗೌಡರವರಿಗೆ ಸೇರಿದ್ದು ಎಂದರೆ ಸರಿ. ನಿಪಿ-3 ರಲ್ಲಿರುವ ನಕ್ಷೆಯಲ್ಲಿ ಶಿಬಿರದ ಕಟ್ಟಡದ ಯಾವುದೇ ದಿಕ್ಕಿಗೂ ಚಂದ್ರೇಗೌಡರವರ ಮಗ ರವಿಗೌಡರವರ ತೋಟ ತೋರಿಸಿಲ್ಲ ಎಂದರೆ ಸರಿ. ಸದರಿ ರವಿಗೌಡರವರನ್ನು ಸಾಕ್ಷಿಯಾಗಿ ಮಾಡಲು ನಾವು ಅವರ ತೋಟದಲ್ಲಿ ಮರೆಯಾಗಿ ಕೂತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗೆ ಸಹಿ ಮಾಡುವಾಗ ನಕ್ಷೆಯನ್ನು ನೋಡಿದ್ದೆ. ನಾವು ಅಡಗಿ ಕೂತಿದ್ದ ಸ್ಥಳವನ್ನು ನಕ್ಷೆಯಲ್ಲಿ ಗುರುತಿಸುವಂತೆ ಪೋಲಿಸರಿಗೆ ನಾನು ಹೇಳಿಲ್ಲ.

ಸ್ಥಳದಲ್ಲಿ ಇರುವ ವಾಸ್ತವ ಅಂಶಕ್ಕೆ ವಿರುದ್ಧವಾಗಿ ಮಹಜರ್ ನಲ್ಲಿ ಯಾವುದಾದರೂ ವಿಚಾರ ನಮೂದಿಸಿದ್ದರೆ ನಾನು ಸರಿ ಮಾಡಿಸುತ್ತಿದ್ದೆ ಎಂದರೆ ಸರಿ. ನಾನು ಮತ್ತು ಚಾಸಾ-4 ರವರು ರವಿಗೌಡ/ರಘುಗೌಡ ರವರ ತೋಟಕ್ಕೆ ಹೋಗಿದ್ದೆವು ಹಾಗೂ ಅಲ್ಲಿ ಆರೋಪಿತರು ನಮಗೆ ಬೈದು ಹಲ್ಲೆ ಮಾಡಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಬೀಟ್ ಕರ್ತವ್ಯದಲ್ಲಿ ಇದ್ದಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಆ ಪೆಟ್ಟು ಆರೋಪಿತರು ಕಲ್ಲಿನಿಂದ

ಹೊಡೆದಿದ್ದರಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಲ್ದೂರಿನ ಆಸ್ಪತ್ರೆಗೆ ಹೋಗಿದ್ದಾಗ ಸ.6.00 ಗಂಟೆಯಾಗಿತ್ತು. ಆ ಆಸ್ಪತ್ರೆಯಲ್ಲಿ ವೈದ್ಯರಿಲ್ಲದೇ ಇದ್ದ ಕಾರಣ ನರ್ಸ್ ಚಿಕಿತ್ಸೆ ಕೊಟ್ಟಿದ್ದರು. ಆ ದಿನ ಸ.7.30 ರಷ್ಟರಲ್ಲಿ ಆಸ್ಪತ್ರೆಯಿಂದ ವಾಪಸ್ಸು ಬಂದಿದ್ದೆ. ಮೇಲೆ ಹೇಳಿದಂತೆ ನಾನು ಆಸ್ಪತ್ರೆಗೆ ಹೋಗಿ ವಾಪಸ್ಸು ಬಂದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋಗುವ ಮುನ್ನ ನನ್ನ ಸ್ನೇಹಿತರ ಕೊಠಡಿಯಲ್ಲಿ ವಿಶ್ರಾಂತಿ ಪಡೆದಿದ್ದೆ ಎಂದು ಹೇಳಿರುವ ವಿಚಾರವನ್ನು ದೂರಿನಲ್ಲಿ ನಮೂದಿಸಿಲ್ಲ. ನರ್ಸ್ ರವರಿಂದ ಚಿಕಿತ್ಸೆ ಪಡೆದಿದ್ದೆ ಎಂದು ದೂರಿನಲ್ಲಿ ನಮೂದಿಸಿಲ್ಲ. ನಾನು ವೈದ್ಯರಿಂದ ಚಿಕಿತ್ಸೆ ಪಡೆದಿದ್ದೇನೆ ಎಂದು ನಿಪಿ-1 ರಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಮ್ಮ ಇಲಾಖೆಯ ತಪ್ಪಿನಿಂದ ಶೋಭ ರವರು ಮೃತ ಪಟ್ಟಿದ್ದ ಕಾರಣ ಅವರಿಂದ ತಪ್ಪಿಸಿಕೊಳ್ಳಲು ಗ್ರಾಮಸ್ಥರ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲು: ಉಳಿದ ಆರೋಪಿತರ ಪರ ವಕೀಲರು 1, 2, 4 ರಿಂದ 6, 8, 13, 14, 16, 17, 20 ಮತ್ತು 21 ನೇ ಆರೋಪಿತರ ಪರ ಆದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.